ಅತಿಕ್ರಮಣವನ್ನು ತೆರವುಗೊಳಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ಜಿಲ್ಲಾಡಳಿತ ಕಚೇರಿಯಾಧಿಕಾರಿಗಳು, ಪೋಲಿಸ್ ವರಿಷ್ಠಾಧಿಕಾರಿಗಳು ಇವರೊಡನೆ ನಿರಂತರ ಪ್ರಚಾರದಲ್ಲರುತ್ತದೆ ಸಮನ್ವಯ ಸಮಿತಿ ಸಭೆಗಳಲ್ಲಿ ° ಭಾಗವಹಿಸುತ್ತದೆ ಇದು ಕಾನೂನು ಮತ್ತು ಸುವ್ಯವಸ್ಥೆಗೊಳ ಪಡುವ ವಿಷಯವಾಗಿರುವುದರಿಂದ ಅತಿಕ್ರಮಣಕಾರರನ್ನು ತೆರವುಗೊಳಿಸಲು ಹೆಚ್ಚಿನ ಕಾಲಾವಕಾಶದ ಅಗತ್ಯವಿದ್ದು ಕಾಲಮಿತಿ ನಿಗದಿಗೊಳಿಸುವುದು ಕಷ್ಟಸಾಧ್ಯವಾಗಿರುತ್ತದೆ.

ಊ) ಐತಿಹಾಸಿಕ ಸ್ಮಾರಕಗಳನ್ನು ಅತಿಕ್ರಮಿಸದಂತೆ ಹಾಗೂ ಸ್ಮಾರಕಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಕರ್ನಾಟಕ ರಾಜ್ಯದ ಭಾರತೀಯ ಪುರಾತತ್ವ ಸರ್ವೇಕ್ಷಣದ ಸ್ಮಾರಕಗಳ ಸುತ್ತಲ್ಲೂ ಅತಿಕ್ರಮಣವನ್ನು ತಡೆಗಟ್ಟಲು ಹಾಗೂ ತೆರವುಗೊಳಿಸಲು ಸಮಿತಿಯೊಂದನ್ನು ಆವೇಶ ಸಂಖ್ಯೆ: ಕಸಂವಾಪ್ರ 163 ಕೆಎಮಯು 2008 ದಿನಾಂಕ 13.11.2008 ರಲ್ಲಿ ರಚಿಸಲಾಗಿದೆ.

264 ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್
ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅ) ಗುಲ್ಬರ್ಗಾ ವಿಮಾನ ನಿಲ್ದಾಣದ ಕಾಮಗಾರಿಯನ್ನು ಮೇಟಾಸ್ ಕಂಪನಿಯವರಿಗೆ ವಹಿಸಿಕೊಟ್ಟಿರುವುದು ನಿಜವೇ;

ನಿಜ.

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಇ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು?

ಮೆ.ಮೈಥಾಸ್ ಸಂಸ್ಥೆಯೊಂದಿಗೆ ಮಾಡಿಕೊಂಡ ಯೋಜನಾ ಅಭಿವೃದ್ಧಿ ಒಪ್ಪಂಧದಂತೆ ಡಿಸೆಂಬರ್ 2008 ರೊಳಗಾಗಿ ಆರ್ಥಿಕ ಮುಕ್ತಾಯದ ಬಗ್ಗೆ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ನೀಡಬೇಕಾಗಿರುತ್ತದೆ. ಎರಡನೆಯದಾಗಿ ಗುಲ್ಬರ್ಗಾ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಅಗತ್ಯವಾದ ಎಲ್ಲಾ ಅನುಮೋದನೆ ತೀರುವಳಿಗಳನ್ನು ಸದರಿ ಸಂಸ್ಥೆಯು ಯೋಜನಾ ಅಭಿವೃದ್ಧಿ ಒಪ್ಪಂಧ ಮಾಡಿಕೊಂಡು 6 ತಿಂಗಳೊಳಗಾಗಿ ಪಡೆಯುವುದು ಕಡ್ಡಾಯವಾಗಿದ್ದಿತು. ಈ ಬಗ್ಗೆ ಸಂಸ್ಥೆಯಿಂದ ಇಲ್ಲಿಯವರೆಗೆ ಎಲ್ಲಾ ಕ್ರಮ ಕೈಗೊಳ್ಳದ ಹಿನ್ನಲೆಯಲ್ಲಿ ಮೈಥಾಸ್ ಸಂಸ್ಥೆಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ಮೈಥಾಸ್ ಸಂಸ್ಥೆಯಿಂದ ಈ ಕುರಿತಂತೆ ಬಂದಿರುವ ಉತ್ತರದಲ್ಲಿ ಯಾವುದೇ ನಿರ್ದಿಷ್ಟ ಅಂಶಗಳಿರುವುದಿಲ್ಲ.

ಈ ಮಧ್ಯೆ ಸತ್ಯಂ ಕಂಪ್ಯೂಟರ್ಸ್ ಸಂಸ್ಥೆಯು ವಿವಾದದ ಸುಳಿಯಲ್ಲಿ ಸಿಲುಕಿದ್ದು, ಮೆ.ಮೈಥಾಸ್ ಸಂಸ್ಥೆಯು ಇದರ ಸಹವರ್ತಿ ಸಂಸ್ಥೆಯಾಗಿರವುದರಿಂದ ಈ ಸಂಸ್ಥೆಯ ನೈತಿಕ ನೆಲೆಗಳು ಪ್ರಶ್ನಾರ್ಹವಾಗಿದ್ದು, ಈ ಸಂಸ್ಥೆಯನ್ನು ಕೈಬಿಡುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

267 ಶ್ರೀ ಮಾಡಾಳ್ ವಿರೂಪಾಕ್ಷಪ್ಪ.ಕೆ (ಚನ್ನಗಿರಿ)
ಮಾನ್ಯ ಮುಖ್ಯಮಂತ್ರಿಗಳು

ಅ) ಸ್ವ ಹಿಡುವಳಿಯಲ್ಲಿ ಬೆಳೆದ ಮರಗಿಡಗಳನ್ನು ರೈತರೇ ಸ್ವಂತ ಕಟಾವು ಮಾಡಲು ಜಾರಿಯಲ್ಲಿರುವ **"The Karnataka Tree Preservation Act (Amendment) Bill- 2005"** ಇದುವರೆವಿಗೂ ಜಾರಿಗೆ ತರದೇ ಇರಲು ಕಾರಣಗಳೇನು?

1976 ರ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆಯ ಕೆಲವು ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರವು ತಾತ್ವಿಕವಾಗಿ ನಿರ್ಧರಿಸಿರುತ್ತದೆ. ಈ ತಿದ್ದುಪಡಿಗೆ ಸಂಬಂಧಿಸಿದಂತೆ, ಕೆಲವು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಬೇಕಾಗಿದ್ದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ಸ್ಪಷ್ಟೀಕರಣ ಪಡೆಯಲಾಗುತ್ತಿದೆ. ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿಯನ್ನು ತರುತ್ತಿರುವುದರಿಂದ, ಇದನ್ನು ಆದಷ್ಟು ಜಾಗ್ರತೆ ಜಾರಿಗೆ ತರಲು ಕ್ರಮವಹಿಸಲಾಗುವುದು.

335 ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ)
ಮಾನ್ಯ ಮುಖ್ಯಮಂತ್ರಿಗಳು

ಅ) ಹೈದ್ರಾಬಾದ್ ಕರ್ನಾಟಕ ಅತ್ಯಂತ ಹಿಂದುಳಿದಿರುವ ಭಾಗವನ್ನು ನಿಯಮ 371ರ ಅಡಿಯಲ್ಲಿ ಸರ್ಕಾರದ ಮೇಲೆ ಒತ್ತಡ ತರಲು ಯಾವ ಕ್ರಮ ಕೈಗೊಳ್ಳಲಾಗಿದೆ?

ರಾಜ್ಯ ಸರ್ಕಾರವು, ಹೈದರಾಬಾದ್–ಕರ್ನಾಟಕ ಪ್ರದೇಶದ ಸಾಮಾಜಿಕ ಅಸಮತೋಲನವನ್ನು ನಿವಾರಿಸುವ ಸಲುವಾಗಿ ಆ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನದ ಅನುಚ್ಛೇದ 371ಕ್ಕೆ ಸೂಕ್ತ ತಿದ್ದುಪಡಿತರಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಮೇಲೆ ನಿರಂತರ ಒತ್ತಾಯ ತರಲಾಗುತ್ತಿದೆ. ಈವರೆಗೂ ಆರು ಬಾರಿ ಮನವಿಗಳನ್ನು ಸಲ್ಲಿಸಲಾಗಿದ್ದು ಸುಮಾರು 17 ಬಾರಿ ಪತ್ರ ವ್ಯವಹಾರ ನಡೆಸಲಾಗಿದೆ. ಇತ್ತೀಚೆಗೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ, ಮಹಾರಾಷ್ಟ್ರದಲ್ಲಿ ರಚಿಸಿರುವಂತೆ ಅಭಿವೃದ್ಧಿ ಮಂಡಳಿಗಳನ್ನು ರಚಿಸುವ ಬಗ್ಗೆ ಮರು ಪರಿಶೀಲಿಸಬೇಕೆಂದು ಸೂಚಿಸಿದ್ದರು. ಇದಕ್ಕೆ ಉತ್ತರವಾಗಿ ರಾಜ್ಯ ಸರ್ಕಾರವು ದಿನಾಂಕ 31–1–2009ರ ತನ್ನ ಪತ್ರದಲ್ಲಿ ಸಂವಿಧಾನದ ಅನುಚ್ಛೇದ 371ನ್ನು ತಿದ್ದುಪಡಿಮಾಡಿ ಈ ಪ್ರದೇಶಕ್ಕೆ ವಿಶೇಷ ಸ್ಥಾನಮಾನ